# ನಮ್ಮ ಸಂಸ್ಕೃತಿಗೆ ಮಾರು ಹೋದ ಟಿನಾಶೆ



ಜಿಂಬಾಬ್ವೆಯಿಂದ ಬಂದ ಟಿನಾಶೆ

ಭಾರತೀಯ ಸಂಸ್ಕೃತಿಗೆ ಆಕರ್ಷಿತರಾಗದವರಿಲ್ಲ. ಅದೆಷ್ಟೋ ವಿದೇಶಿಗರು ಭಾರತಕ್ಕೆ ಬಂದು ಸಂಸ್ಕೃತಿಗೆ ಮಾರುಹೋಗಿ ಇಲ್ಲಿಯೇ ನೆಲೆ ಕಂಡುಕೊಳ್ಳಲು ಹಂಬಲಿಸುತ್ತಿದ್ದಾರೆ. ವಿವಿಧತೆಯಲ್ಲಿ ಏಕತೆ ಸಾಧಿಸಿರುವ ಭಾರತೀಯ ಸಂಸ್ಕೃತಿಗೆ ಜಿಂಬಾಂಬ್ವೆಯ ಟಿನಾಶೆ ಕೂಡ ಮಾರುಹೋಗಿದ್ದಾರೆ.

'ಭಿನ್ನ ಭಾಷೆ, ಧರ್ಮ, ಆಚರಣೆ, ನಿಲುವು ಹೊಂದಿರುವ ಭಾರತೀಯರು, ತಮ್ಮ ಸಂಸ್ಕೃತಿಯನ್ನು ಅದಮ್ಯವಾಗಿ ಗೌರವಿಸುತ್ತಾರೆ.  ಈ ಮನೋಭಾವವೇ ಸಂಸ್ಕೃತಿಯ ಬೇರುಗಳನ್ನು ಗಟ್ಟಿಯಾಗಿಸಿದೆ' ಎಂಬ ಅವರ ಮಾತು ಭಾರತೀಯರ ಏಕತೆಯ ಭಾವವನ್ನು ಪುಷ್ಟೀಕರಿಸುತ್ತದೆ.

ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಎ ಎಲ್‌ಎಲ್‌ಬಿ ಮಾಡುತ್ತಿರುವ ಟಿನಾಶೆ ಕೂಡ ಭಾರತೀಯ ನೆಲವನ್ನು ಅಷ್ಟೇ ಗೌರವಿಸುತ್ತಾರೆ.

'ಪುಟ್ಟ ದೇಶ ಜಿಂಬಾಬ್ವೆ ಮೇಲೆ ಪಾಶ್ಚಿಮಾತ್ಯ ಸಂಸ್ಕೃತಿ ಅದರಲ್ಲೂ, ಯೂರೋಪ್ ಸಾಕಷ್ಟು ಪ್ರಭಾವ ಬೀರಿದೆ. ಬಹಳ ಬೇಗ ಪಾಶ್ಚಿಮಾತ್ಯರ ಜೀವನ ಶೈಲಿಗೆ ನನ್ನ ಜನ ಮಾರುಹೋಗಿದ್ದಾರೆ. ಆದರೆ, ಭಾರತೀಯರು ಹಾಗಲ್ಲ. ಪಾಶ್ಚಾತ್ಯರು ಪ್ರಭಾವ ಬೀರಿದ್ದರೂ ಅವರವರ ಸಂಸ್ಕೃತಿಗೆ ಗೌರವ ನೀಡುತ್ತಾರೆ. ಭಿನ್ನ ಧರ್ಮಗಳು, ಭಾಷೆ ಇಲ್ಲಿದೆ. ಆದರೂ, ತಮ್ಮ ಸಂಸ್ಕೃತಿಯನ್ನು ಯಾರೂ ಬಿಟ್ಟುಕೊಡುವುದಿಲ್ಲ. ಈ ಅಂಶ ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿದೆ' ಎನ್ನುವ ಟಿನಾಶೆ, ತಮಿಳುನಾಡಿನ 'ಜಲ್ಲಿಕಟ್ಟು' ವಿವಾದವನ್ನು ಉದಾಹರಣೆಯಾಗಿ ನೀಡುತ್ತಾರೆ.

'ಮೊದಲ ಬಾರಿಗೆ ಮುಂಬೈಗೆ ಬಂದಾಗ ಅಲ್ಲಿನ ಜನಸಾಗರ ನೋಡಿ ಇಷ್ಟು ದಿನ ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ಇದ್ದೆ ಎಂದೆನಿಸಿತು. ಇಲ್ಲಿಗೆ ಬಂದಾಗ ಕಷ್ಟ ಎನಿಸಿದ್ದು ಈ ನೆಲದೊಂದಿಗೆ ಒಡನಾಟ ಬೆಸೆದುಕೊಳ್ಳುವ ಅನಿವಾರ್ಯತೆ. ನಮ್ಮ ದೇಶಕ್ಕೂ ಇಲ್ಲಿಗೂ ಸಾಕಷ್ಟು ವ್ಯತ್ಯಾಸ ಇದೆ. ಆದ್ದರಿಂದ ಹೊಂದಾಣಿಕೆ ಸ್ವಲ್ಪ ಕಷ್ಟ ಎನಿಸಿತು. ಈ ಹೊಂದಾಣಿಕೆ ಸಮಯದಲ್ಲಿ ಇಲ್ಲಿನ ಜನರು ಸಾಕಷ್ಟು ಸಹಾಯಕ್ಕೆ ಬಂದರು. ನಾವು ಜನರಲ್ಲಿ ಬೆರೆತರೆ ಅವರು ನಮ್ಮೊಂದಿಗೆ ಬೆರೆಯುತ್ತಾರೆ ಎಂಬುದು ನನ್ನ ನಿಲುವು. ಹಾಗಾಗಿ, ಎಲ್ಲರೊಂದಿಗೆ ಬೆರೆಯಲು ಶುರು ಮಾಡಿದೆ. ಈ ಪ್ರಕ್ರಿಯೆಯಲ್ಲಿ ನನ್ನ ಅಕ್ಕಪಕ್ಕದವರು ತುಂಬಾ ನೆರವಾದರು' ಎನ್ನುತ್ತಾರೆ ಟಿನಾಶೆ.

'ಜಿಂಬಾಬ್ವೆ ಸೇರಿದಂತೆ ಆಫ್ರಿಕಾ ಖಂಡ ಉತ್ತಮ ನಾಯಕನ ಹುಡುಕಾಟದಲ್ಲಿದೆ. ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸಬಲ್ಲ ಉತ್ತಮ ನಾಯಕತ್ವದ ಕೊರತೆ ಅಲ್ಲಿ ಕಾಡುತ್ತಿದೆ. ಸಾಕ್ಷರತೆ ಹೊಂದಿದ ನಾಯಕತ್ವದ ಅವಶ್ಯಕತೆ ಇದೆ. ನನ್ನ ವ್ಯಕ್ತಿತ್ವದಲ್ಲಿ ಸಾಕಷ್ಟು ಪಕ್ವತೆ ಬಂದ ನಂತರ ರಾಜಕೀಯದತ್ತ ಗಮನ ಹರಿಸುತ್ತೇನೆ' ಎನ್ನುತ್ತಾರೆ ಅವರು.

ತಮಿಳುನಾಡು, ಮುಂಬೈ, ಕೊಯಮತ್ತೂರು, ಪುಣೆ, ಸೇಲಂ, ಚೆನ್ನೈ, ಬೆಂಗಳೂರು ಮೊದಲಾದ ಸ್ಥಳಗಳನ್ನು ವೀಕ್ಷಿಸಿದ್ದಾರೆ. ಅದರಲ್ಲಿ ಮೈಸೂರು, ಮುಂಬೈ ಅಚ್ಚುಮೆಚ್ಚಿನ ತಾಣಗಳು. ಬೆಂಗಳೂರು ಎಂದರೆ ವರ್ಜ್ಯ. 'ಅಲ್ಲಿನ ಪರಿಸರ, ಜನಸಂದಣಿ ಉಸಿರುಗಟ್ಟಿಸುತ್ತದೆ. ಅದಕ್ಕೆ ತದ್ವಿರುದ್ಧವಾಗಿ ಮೈಸೂರು ಇದೆ. ಶಿಕ್ಷಣಕ್ಕೆ ಇದು ಉತ್ತಮ ಸ್ಥಳ. ನಾನು ಕಂಡುಕೊಂಡಂತೆ ಹೊರಗಿನವರನ್ನು (ವಿದೇಶಿಗರನ್ನು) ದಕ್ಷಿಣ ಭಾರತದ ಜನ ಹೆಚ್ಚು ಆತ್ಮೀಯವಾಗಿ ಕಾಣುತ್ತಾರೆ. ಊಟ, ತಿಂಡಿ, ನಿದ್ದೆ ಎಲ್ಲವನ್ನೂ ಕಾಳಜಿಯಿಂದ ವಿಚಾರಿಸುತ್ತಾರೆ. ಸ್ನೇಹಪರತೆ ಹೆಚ್ಚು. ಮೈಸೂರಿಗೆ ಮೊದಲು ಬಂದಾಗ ಪರಕೀಯ ಭಾವನೆ ಕಾಡಲಿಲ್ಲ. ಈಗ ಎಲ್ಲರೊಳಗೆ ನಾನೊಬ್ಬನಾಗಿದ್ದೇನೆ' ಎನ್ನುತ್ತಾರೆ ಟಿನಾಶೆ.

'ಆತಿಥ್ಯದಲ್ಲಿ ಭಾರತ ಯಾವತ್ತೂ ಮುಂದು. ನನ್ನ ದೇಶದಲ್ಲಿ ಹೊರಗಿನವರು ಬಂದರೆ ಮಾತನಾಡಿಸಲು ಹಿಂಜರಿಯುತ್ತಾರೆ. ಇಲ್ಲಿನ ಹಬ್ಬದ ಆಚರಣೆಗಳು ನನಗೆ ತುಂಬಾ ಇಷ್ಟ. ಗಣಪತಿ ಹಬ್ಬ, ದೀಪಾವಳಿ, ಹೋಳಿ, ಯುಗಾದಿ, ಸಂಕ್ರಾಂತಿ, ರಂಜಾನ್, ಈದ್ ಇವೆಲ್ಲವುಗಳಲ್ಲೂ ನಾನು ಪಾಲ್ಗೊಂಡಿದ್ದೇನೆ. ಆಚರಣೆಗಳ ಹೆಸರಲ್ಲಿ ಸಂಬಂಧಗಳು ಒಟ್ಟುಗೂಡುತ್ತವೆ. ಇದು ನನ್ನನ್ನು ಬಹಳಷ್ಟು ಪ್ರಭಾವಿಸಿತು. ನಮ್ಮಲ್ಲಿ 'ಈಸ್ಟರ್', 'ಕ್ರಿಸ್‌ಮಸ್', 'ನ್ಯೂ ಇಯರ್' ವರ್ಷಕ್ಕೆ ಈ ಮೂರೇ ಹಬ್ಬ' ಎನ್ನುತ್ತಾರೆ.

ಫೆಡರೇಶನ್ ಆಫ್ ಇಂಟರ್‌ನ್ಯಾಶನಲ್ ಸ್ಟೂಡೆಂಟ್ಸ್ ಅಸೋಸಿಯೇಷನ್ ಉಪಾಧ್ಯಕ್ಷರಾಗಿರುವ ಟಿನಾಶೆ, ಅವರ ಬಿಡುವಿನ ಸಮಯವನ್ನು ವಿದೇಶಿ ವಿದ್ಯಾರ್ಥಿಗಳ ಸಮಸ್ಯೆ ಆಲಿಸಲು, ಬಗೆಹರಿಸಲು ಮೀಸಲಿಡುತ್ತಾರಂತೆ. ನ್ಯೂಜಿಲಂಡ್ ರಾಷ್ಟ್ರೀಯ ಆಟ 'ರಗ್ಬಿ' ಆಡುವುದು ಅವರ ಇಷ್ಟದ ಹವ್ಯಾಸಗಳಲ್ಲಿ ಒಂದು. ದಕ್ಷಿಣ ಭಾರತದ ಎಗ್‌ದೋಸೆ, ಮಾಂಸಾಹಾರ ಅವರ ಇಷ್ಟದ ತಿನಿಸು.

■ ಸುಮಾ ಬಿ.